IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 12, Iss 1, 2023

# "ವಚನ ಸಾಹಿತ್ಯದಲ್ಲಿ ಸಾಮಾಜಿಕತ್ವ"

**ಡಾ,ಭೀಮಣ್ಣ ಎಚ್**

**ಸಹ ಪ್ರಾಧ್ಯಾಪಕರು**

**ಸರಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂ**

ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ಸುಖವಾಗಿ ಬಾಳಬೇಕು ಸುಖ-ದುಃಖಗಳು ಸಮಾನವಾಗಿ ಸ್ವೀಕರಿಸಿ ಜೀವನ ನಡೆಸಬೇಕು. ಮನುಷ್ಯರ ನಡುವೆ ಯಾವುದೇ ಭೇದವಿಲ್ಲ ಎಲ್ಲರೂ ಸಮಾನರು ಎಂದು ಸಾರುತ್ತ ಬಸವಾದಿ ಶರಣರು ಸಾಮಾಜಿಕ ಸಮಾನತೆಯ ತಳಹದಿ ಮೇಲೆ ಸಮಾಜವನ್ನು ಕಟ್ಟ ಬಯಸಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನಿಷ್ಟ ಪದ್ಧತಿಗಳ ವಿರುದ್ಧ ಧ್ವನಿ ಎತ್ತಿದರು. ಭಕ್ತಿ ಮತ್ತು ದೇವರ ಮಧ್ಯೆ ಯಾವುದೇ ಅಂತರವಿಲ್ಲ ಸತ್ಯ ನುಡಿಯುವದೇ ದೇವಲೋಕ ಮಿತ್ಯ ನುಡಿಯುವುದೇ ಮರೆತ ಲೋಕ ಎಂದು ಬಸವಾದಿ ಶರಣರು ಹೇಳಿದರು. ಧರ್ಮ ದೊಡ್ಡದಲ್ಲ ಧರ್ಮ ಮನುಷ್ಯ ನಿರ್ಮಾಣ ಮಾಡಿದ್ದು ಧರ್ಮದ ಹೆಸರಿನಲ್ಲಿ ಮನುಷ್ಯನ ಬದುಕು ಹಾಳಾಗುವುದನ್ನು ಖಂಡಿಸಿದರು. ಜಾತಿ,ಮತ,ಪಂಥ ಎಂದು ಪುರೋಹಿತ ಶಾಯಿ ವರ್ಗ ಗರ್ವಹಂಕಾರದಿಂದ ಮೆರೆಯುತ್ತಿರುವ ಕಾಲಮಾನದಲ್ಲಿ ಯಾರೂ ಶ್ರೇಷ್ಠರಲ್ಲ ಯಾರೂ ಕನಿಷ್ಠರಲ್ಲ ಎಂದು ಮನುಷ್ಯ ಜೀವಿಗಳಿಗೆ ಸಮಾನತೆ ಅರಿವು ಮೂಡಿಸಿದರು. ಆದ್ಯ ವಚನಕಾರ ಜೇಡರ ದಾಸಿಮಯ್ಯ ಸಾಮಾಜದ ಜನರ ಮನಸ್ಥಿತಿಯನ್ನು ತಿಳಿಸುವಲ್ಲಿ ಒಂದು ವಚನ ವಚನದಲ್ಲಿ ಹೇಗೆ ಹೇಳುತ್ತಾರೆ.

**"ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ**
**ಗೋರಿ ಗೊಳಿಸಿ ಕುರಿಯ ಕೊರಳನೆ ಕೊಯ್ದುಂಬ**
**ಕ್ರೂರಕರ್ಮಿಗಳನವರ ಶಿವ ಭಕ್ತರೆನ್ನಬಹುದ?**
**ಆರೈಯದೆ ಅವನ ಮನೆಯಲುಂಡ ಭಕ್ತ**
**ಅಘೋರ ನರಕ್ಕಿಳಿವ ಕಾಣಾ ರಾಮನಾಥ "**

ಸಮಾಜದ ವೇಷದಂಭಕರಂದು ಕರೆಸಿಕೊಳ್ಳುವ ಗುರುಗಳನ್ನು ಕುರಿತು ಹೇಳಿದ ಮಾತುಗಳಾಗಿವೆ. ಮಾರಿ ದೇವತೆಯನ್ನು ಪೂಜೆ ಮಾಡುವ ಒಬ್ಬ ವ್ಯಕ್ತಿ ಕುರಿಯ ಕತ್ತನ್ನೇ ಕತ್ತರಿಸಿ ಗೋರಿ ಗೊಳಿಸಿದ ಕ್ರೂರ ವ್ಯಕ್ತಿಯ ಮನೆಯಲ್ಲಿ ಅವನು ಯಾರು ಎಂದು ಪರಿಗಣಿಸದೆ

ಆಹಾರವನ್ನು ಸೇವಿಸಿದ ವ್ಯಕ್ತಿ ಶಿವಭಕ್ತ ನಾಗಬಲ್ಲನೆ. ಇಲ್ಲಿ ಕುಲವೇಣಿಸಲು ಸಾಧ್ಯವೇ?ಸಮಾಜ ಸಮಾನತೆ ನೆಲೆಯಲ್ಲಿ ಸಾಗಲು ಹೇಗೆ ಸಾಧ್ಯ ಎಂದು ಹೇಳುತ್ತಾರೆ. ಅಂತ ಕ್ರೂರ ವ್ಯಕ್ತಿ ಶಿವಭಕ್ತ ನಾಗಲು ಸಾಧ್ಯವಿಲ್ಲ ದೇವರ ಸಾನಿಧ್ಯಕ್ಕೆ ಹೋಗಲು ಸಾಧ್ಯವಿಲ್ಲ ಘೋರ ನರಕಕ್ಕೆ ಹೋಗುವನು ಎಂದು ಹೇಳುವರು. ಮಾನವ ಜನಾಂಗ ಮೊದಲು ಜಾತಿ ಮತ,ಪಂಥ, ಭೇದ ಭಾವ ಮರೆತು ಸಮಾನ ನಿಧಿಯಿಂದ ಜೀವಿಸಬೇಕು ಒಂದಾಗ ಮಾತ್ರ ಸರ್ವರ ಏಳಿಗೆ ಯಾಗುವುದು ಎಂದು ಅದ್ಯವಚನಕಾರ ನುಡಿಯುತ್ತಾರೆ.

**" ಶೀಲವಂತನಾದಡೆ ಜಾತಿಯ ಬಿಡಬೇಕು**
**ಶಿವ ಜ್ಞಾನಿಯಾದಡೆ ಸಮಯವ ಬಿಡಬೇಕು**
**ಹಿಂಗಲ್ಲದೆ ಜಗದಲ್ಲಿ ನಡೆಯುವ ಬ್ರಾಂತರ ಸುದ್ದಿ ಯೇಕೆ**
**ನಿಭ್ರಾಂತನಾದ ಶರಣಂಗೆ ಅಮೂಗೇಶ್ವರ? "**

ಅಮುಗೆಯ ರಾಯಮ್ಮ ತಮ್ಮ ವಚನದಲ್ಲಿ ಹೀಗೆ ಹೇಳುತ್ತಾರೆ. ಸಮಾಜ ಸುಧಾರಣೆಯಾಗಬೇಕಾದರೆ ಮೊದಲು ಜಾತಿಯನ್ನು ಅಳಿಯಬೇಕು ಜಾತಿಯನ್ನು ಅಳಿಯಬೇಕಾದರೆ ಮನುಷ್ಯ ಮನುಷ್ಯರ ಮಧ್ಯ ತಾರತಮ್ಯದ ಭೇದ ಅಳಿಯಬೇಕು ಶ್ರೇಷ್ಠ ಕನಿಷ್ಠ ಎಂದು ಯಾರು ಇರುವುದಿಲ್ಲ ಯಾರು ತಮ್ಮನ್ನು ತಾವು ಅರಿತುಕೊಂಡು ಜೀವಿಸಿತಾರೋ ಅವರೇ ಶ್ರೇಷ್ಠರು ಎಂದು ಒಬ್ಬ 12ನೇ ಶತಮಾನದ ಮಹಿಳೆ ಹೇಳುವ ನೇರ ನುಡಿಯ ಮಾತುಗಳು. ಶೀಲವಂತನು ಎಂದು ಕರೆಸಿಕೊಳ್ಳುವ ವ್ಯಕ್ತಿ ಮೊದಲು ಜಾತಿ,ಮತ,ಪಂಥ ಎನ್ನುವುದನ್ನು ಬಿಡಬೇಕು ಒಬ್ಬ ಶಿವ ಜ್ಞಾನಿ ಎನಿಸಿಕೊಳ್ಳುವವನು ದೇವರಿಗಾಗಿ ನನ್ನನ್ನು ತಾನು ಅರ್ಪಿಸಿಕೊಂಡಾಗ ಸಮಯದ ಅರಿವೇ ಇರಬಾರದು ತಾರತಮ್ಯ ಅಳಿದು ತನ್ನನ್ನು ತಾನು ಅರಿಯದೆ ಹೋದರೆ ಎಂದಿಗೂ ಸಮಾಜ ಸುಧಾರಿಸಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಶಿವಶರಣರ ಸಮೂಹದಲ್ಲಿದ್ದ ಮಹಿಳಾ ಸರಣಿಯರು ನಮ್ಮನ್ನು ತಾವು ಅರಿತುಕೊಂಡು ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾಜ ಸರಿ ದಾರಿಗೆ ತರಲು ಪ್ರಯತ್ನಿಸಿದ ದೃಷ್ಟಾಂತಗಳನ್ನು ಕಾಣಬಹುದು. ಸಮಾಜ ಬೋಧನೆ ಮಾಡುವ ವ್ಯಕ್ತಿ ಮೊದಲು ಸಿದ್ಧನಾಗಿರಬೇಕು ಆನಂತರ ಸಮಾಜ ಸುಧಾರಣೆಗೆ ಇಳಿಯಬೇಕು ಒಂದಾಗ ಮಾತ್ರ ಆ ವ್ಯಕ್ತಿಗೆ ಸಮಾಜದಲ್ಲಿ ಮನ್ನಣೆ ಸಿಗಲು ಸಾಧ್ಯ ಹೀಗೆ ವಿವಿಧ ಪರ್ಯಾಯ ಅಮುಗೆಯ ರಾಯಮ್ಮನವರು ತಮ್ಮ ಜೀವನದ ಉದ್ದಕ್ಕೂ ಮಾತುಗಳ ಮೂಲಕವೇ ಸಮಾಜ ಸುಧಾರಿಸಲು ಸಲಹೆ ನೀಡಿರುವುದು ಕಂಡುಬರುತ್ತದೆ.

**" ಆತನ ಅಗಲೊಳಗೆ ಕಪ್ಪೆ ಬಿದ್ದಿಹುದು**

**ಅನ್ಯರ ಎಡೆಯೊಳಗೆ ಕಪ್ಪೆ ಇದ್ದಿತು ನೋಡಂಬ**
**ಅಂಧಕಗಳಿರಾ**
**ತಮ್ಮ ಕಾಣದೆ ಅನ್ಯರ ಧಿಕ್ಕರಿಸಿ ನುಡಿವ ಕುನ್ನಿಗಳಿಗೆ**
**ಶಿವಲಿಂಗ ಮುನ್ನವೇ ಇಲ್ಲ! ಎಂದ! ನಿಮ್ಮ**
**ಶರಣ ಚೆನ್ನಯ್ಯಪ್ರಿಯ ನಿರ್ಮಾಣ ಪ್ರಭುವೇ "**

ತಮ್ಮ ತಪ್ಪುಗಳನ್ನು ತಾವು ಅರಿತುಕೊಳ್ಳದೆ ಬೇರೆಯವರ ತಪ್ಪುಗಳನ್ನು ಎತ್ತಿ ತೋರಿಸುವ ಸಮಾಜದ ದುಷ್ಟ ಜನರನ್ನು ಕುರಿತು ಚೆನ್ನಯ್ಯ ಶರಣರು ಹೀಗೆ ನಡೆಯುತ್ತಾರೆ. ತಾವು ಊಟ ಮಾಡುವ ಅಗಲಿನಲ್ಲಿ ದೊಡ್ಡದೊಂದು ಕಪ್ಪೆ ಬಿದ್ದಿರುವಾಗ ಇನ್ನೊಬ್ಬರ ಎಡೆಯಲ್ಲಿ ಕಪ್ಪೆ ಬಿದ್ದಿದೆ ಎಂದು ಎತ್ತಿ ತೋರಿಸುವ ವ್ಯಕ್ತಿಯನ್ನು ಕುರಿತು ಹೇಳುವಾಗ ತಮ್ಮ ತಪ್ಪುಗಳನ್ನು ಅರಿಯದೆ ಬೇರೆಯವರ ತಪ್ಪುಗಳನ್ನು ತಿಳಿಸುವವರನ್ನು ಕುರಿತು ನೀಡಿದ ನಿದರ್ಶನ ಇದು. ಸಮಾಜದ ದುಷ್ಟ ವ್ಯಕ್ತಿಗಳಿಗೆ ಯಾವಾಗಲೂ ಬೇರೆಯವರ ಚಿಂತೆ ಇರುತ್ತದೆ ತಾವು ಸರಿ ಇದ್ದುಕೊಂಡು ಬೇರೆಯವರು ಸರಿ ಆಗಬೇಕೆಂದು ಹೇಳುವವರಲ್ಲ ನೇರವಾಗಿ 12ನೇ ಶತಮಾನದಲ್ಲಿ ನಡೆಯುತ್ತಿದ್ದ ಅನಿಷ್ಟತೆಯಗಳ ವಿರುದ್ಧ ಧ್ವನಿ ಎತ್ತುವಾಗ ಕುನ್ನಿಗಳು ಎಂಬ ಮಾತನ್ನು ಹೇಳುತ್ತಾರೆ. ಕುನ್ನೆಗಳು ಎಂದರೆ ಗಂಡು ಮಕ್ಕಳನ್ನು ಕುರಿತು ಹೇಳಿದ ಮಾತಾಗಿದೆ. ತಮ್ಮ ಅರಿವು ತಮಗೆ ಇರದೆ ವ್ಯಕ್ತಿಯು ದೇವರ ಅರಿವು ಹೇಗೆ ಹರಿಯುತ್ತಾನೆ ದೇವರನ್ನು ಇನ್ನೊಬ್ಬರಿಗೆ ತೋರಿಸಲು ಹೇಗೆ ಸಾಧ್ಯ ಲಿಂಗವಾದರೂ ಹೇಗೆ ಮೆಚ್ಚುತ್ತದೆ ಅಂಥವರಿಗೆ ಚೆನ್ನಯ್ಯಪ್ರಿಯ ನಿರ್ಮಾಣ ಪ್ರಭು ಎಂದಿಗೂ ಕಾಣಲಾರ ಎಂದು ನುಡಿಯುತ್ತಾರೆ. 12ನೇ ಶತಮಾನದ ಬಸವಾದಿ ಶರಣರು ಸಮಾಜದ ಕನಿಷ್ಠ ಪದ್ಧತಿಗಳ ವಿರುದ್ಧ ಧ್ವನಿ ಎತ್ತಿ ದೃಷ್ಟಾಂತಗಳನ್ನು ನೀಡುತ್ತಾ ಸಮಾಜವನ್ನು ಪ್ರಯತ್ನಿಸಿದರು ಅವರು ಕೂಡ ನುಡಿದಂತೆ ನಡೆದರು ಹೀಗಾಗಿ 12ನೇ ಶತಮಾನವು ಎಂದೆಂದಿಗೂ ಮನುಷ್ಯ ಜೀವಿಗಳಿಗೆ ದಾರಿ ದೀಪವಾಗಿದೆ. ಇನ್ನೊಂದು ವಚನದಲ್ಲಿ ಬಸವಣ್ಣನವರು ಸಮಾಜದ ಕೆನರಾ ಮನಸ್ಥಿತಿಯನ್ನು ತಿಳಿಯುವಲ್ಲಿ ಹೀಗೆ ಹೇಳುತ್ತಾರೆ.

**" ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ**
**ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ**
**ಮಾಡುವ ನೀಡುವ ನಿಜಗುಣವುಳ್ಳಡೆ**
**ಕೂಡಿಕೊಂಡ ನಮ್ಮ ಕೂಡಲಸಂಗಮದೇವ "**

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 12, Iss 1, 2023

ಬಸವಣ್ಣನವರ ವಾಣಿಯಂತೆ ಮಾಡಿದೆನೆಂಬುದು ಮನದಲ್ಲಿ ಇದ್ದರೆ ಎಂದಿಗೂ ಶಿವನಿಗೆ ಅರ್ಪಿತವಾಗಲಾರದು ಪಟ್ಟು ಹಂಗಿಸಬಾರದು ಬೇರೆಯವರ ಹಂಗಿನಲ್ಲಿಯೂ ಬಾಳಬಾರದು ಎಂದು ಹೇಳುವ ಪರಿಯಲ್ಲಿ ಕಾಯಕದ ನಿಧಿಯನ್ನು ಕುರಿತು ನಿದರ್ಶನಗಳನ್ನು ಕೊಟ್ಟು ಜೀವನ ತತ್ವಗಳನ್ನು ಬೋಧಿಸಿದ್ದಾರೆ. ಮನಸ್ಸು ಶುದ್ಧ ವಿಲ್ಲದೆ ಮಾಡಿದ ಭಕ್ತಿಯು ವ್ಯರ್ಥವಾಗುವುದು ಶುದ್ಧವಿಲ್ಲದೆ ನೀಡಿದ ಪ್ರಸಾದವು ಎಂದು ಶುದ್ಧವಾಗಲಾರದು ಕಾಯಕ ಮತ್ತು ದಾಸೋಹ ಎರಡು ಸುದ್ದವಿದ್ದಾಗ ಮಾತ್ರ ಮಾಡುವ ನೀಡುವ ಕೈಗಳು ಶುದ್ಧವಾಗಿರುತ್ತವೆ ಬಂದಾಗ ಮಾತ್ರ ಲಿಂಗ ಮೆಚ್ಚುವುದು ಕೂಡಲಸಂಗಮದೇವ ಮೆಚ್ಚುವನು ಎಂದು ಹೇಳುತ್ತಾರೆ. 12ನೇ ಶತಮಾನ ಸಾಮಾಜಿಕ ಕ್ರಾಂತಿಯ ನಿಲೆಯಾಗಿದೆ ಬಸವಾದಿ ಶರಣರು ತಮ್ಮ ಅನುಭವದ ಮಾತುಗಳ ಮೂಲಕ ಸಮಾಜ ಸರಿ ದಾರಿಗೆ ತರಲು ಪ್ರಯತ್ನಿಸಿದರು ಮೇಲು ಕೀಳು ಎಂಬ ತಾರತಮ್ಯ ಅಳಿದರು ಹುಟ್ಟುವಾಗ ಮನುಷ್ಯ ಏನೂ ತೆಗೆದುಕೊಂಡು ಬರುವುದಿಲ್ಲ ಹುಟ್ಟಿದಾದ ನಂತರದಲ್ಲಿ ಜಾತಿಯ ಪಟ್ಟ ಬರುವುದು ಸಮಾಜದಲ್ಲಿ ಬೆಳಿತಾ ಬೆಳಿತಾ ಮನಸ್ಸು ಕಲ್ಮಶಗೊಂಡು ವಿಚಾರಗಳು ಬರುತ್ತವೆ ಅದಕ್ಕಾಗಿ ಗುಣಗಳ ನಳಿಯಬೇಕು ಎಂದು ಹೇಳುತ್ತಾರೆ. ತಾನು ಏನು ಮಾಡುತ್ತೇನೆ ಎಂಬುದರ ಅರಿವಿಲ್ಲದೆ ನಾನು ಮಾಡಿದ್ದು ನನ್ನಿಂದಲೇ ಇಷ್ಟೆಲ್ಲಾ ಆಗಿರುವುದು ನಾನೇ ಇದಕ್ಕೆ ಕಾರಣ ಎಂದು ಹೇಳುವಾಗ ಕಾಯಕದ ಸಂಸ್ಕೃತಿಯು ಸತ್ಯವಾಗಲಾರದು ಮನಸ್ಸು ಸರಿ ಇಲ್ಲದ ವ್ಯಕ್ತಿ ಏನು ಮಾಡಿದರು ವ್ಯರ್ಥವಾಗುವುದು. ಕಾಯಕ ದೇವರ ಸನ್ನಿಧಾನಕ್ಕೆ ಮನುಷ್ಯನನ್ನು ಕರೆದುಕೊಂಡು ಹೋಗುತ್ತದೆ ಹಂಚಿಕೊಂಡು ಉಣ್ಣುವ ಮನಸ್ಸು ಆಗಬೇಕು ಎಂದು ಶರಣರು ಸಾರಿದ್ದಾರೆ. ಲಿಂಗ ಮತ್ತು ಜಂಗಮದ ಮಹತ್ವ ಓದಿಸುವುದರ ಮೂಲಕ ಸತ್ಯದ ಅರಿವು ತಿಳಿಸಿದ್ದಾರೆ. ಬಸವಣ್ಣನವರ ನೇತೃತ್ವದಲ್ಲಿ ಸೇರಿದ ಶರಣರ ಸಮೂಹ ಕಾಯಕ, ದಾಸೋಹ, ಲಿಂಗ, ಜಂಗಮದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸಿಕೊಟ್ಟರು ಜೀವನ ನಡೆಸುವ ಕಲೆಯನ್ನು ಕಲ್ಪಿಸಿ ಕೊಟ್ಟಿರುವುದು ಕಂಡು ಬರುತ್ತದೆ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 12, Iss 1, 2023

## ಆಕಾರ ಗ್ರಂಥಗಳು

1) ವಚನವರ್ಷ ( ದಿನಕ್ಕೊಂದು ವಚನ ) ಸಂಪಾದಕರು ಡಾ. ಎಂ ಎಂ ಕಲಬುರ್ಗಿ
2) ಸಮಗ್ರ ವಚನ ಸಂಪುಟಗಳು ಸಂ.ಡಾ. ಎಂ ಎಂ ಕಲಬುರ್ಗಿ
3) ವಚನ ಚಳುವಳಿ ಡಾ. ಬಸವರಾಜ ಸಬರದ
4) ವಚನ ಸಾಹಿತ್ಯ ಡಾ. ಎಂ ಚಿದಾನಂದ ಮೂರ್ತಿ
5) ವಚನಪ್ರಜ್ಞೆ ಶ್ರೀ ಮಹಾಂತ ಸ್ವಾಮೀಜಿ ಮುದುಗಲ್ಲ
6) ಶಿವದಾಸ ಗೀತಾಂಜಲಿ ಸಂ. ಬಸವರಾಜ ಎಲ್.